Amildari List (reservation for Depressed Classes).

Q.—48. Sri H. K. SIDDAIYA (Belur—Scheduled Castes).—

Will the Government be pleased to state :—

(*a*) whether there is the Amildari list before Government ;

(*b*) the total number in the list ;

(*c*) the number in the list that belong to Depressed Classes ;

(*d*) whether due representation according 16 2/3 per cent reservation to the members of the Depressed Classes is given as shown in the list ?

A.—Sri Kadidal MANJAPPA (Minister for Revenue and Public Works),—

(*a*) The Public Service Commission has sent a list which is under the consideration of the Government.

(*b*), (*c*) and (*d*) Cannot be disclosed at this stage.

ಶ್ರೀ ಎಚ್. ಕೆ. ಸಿದ್ದಯ್ಯ.—ಈ ಅಮಲ್ದಾರಿ ಪಟ್ಟಿಯಲ್ಲಿರತಕ್ಕ ಸಂಖ್ಯೆಯಲ್ಲಿ ನಿಮ್ನ ವರ್ಗದ ಸಂಖ್ಯೆ ಎಷ್ಟೆಂದು ಕೇಳಿದೆ ; ಅದಕ್ಕೆ ಉತ್ತರ ಹೇಳಲು ಸಾಧ್ಯವೇ ?

ಶ್ರೀ ಕಡಿದಾಳ್ ಮಂಜಪ್ಪ.—ನರ್ಕಾರದವರು ಈ ಬಗ್ಗೆ ಒಂದು ತೀರ್ಮಾನಕ್ಕೆ ಬರುವವರೆಗೂ ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಚ್. ಕೆ. ಸಿದ್ದಯ್ಯ.—ನಿಮ್ನ ವರ್ಗದವರಿಗೆ ಮೀಸಲಾಗಿಡುವ ಸ್ಥಾನಗಳ ಬಗ್ಗೆ ನರ್ಕಾರದವರು ಇತ್ತೀಚೆಗೆ ಹೊರಡಿಸಿರುವ ಶೇಕಡಾವಾರು 16⅔ರ ಬಗ್ಗೆ ನಿಯಮವನ್ನು ಪರಿಪಾಲಿಸಿ ಈ ಸ್ಥಾನಗಳನ್ನು ಕಲ್ಪಿಸಿಕೊಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಈ ಬಗ್ಗೆ ನೀತಿ ನಿಯಮವೇನಿದೆಯೋ ಅದನ್ನು ಅನುನರಿಸಿಯೇ ಕ್ರಮ ಕೈಕೊಳ್ಳುತ್ತೇವೆಂದು ತಿಳಿನುತ್ತೇನೆ.

ಶ್ರೀ ಪಿ. ಆರ್. ರಾಮಯ್ಯ.—ಈ ಪಟ್ಟಿ ತಯಾರು ಮಾಡಿರುವುದರಲ್ಲಿ direct recruitment ಎಷ್ಟು ?

ಶ್ರೀ ಕಡಿದಾಳ್ ಮಂಜಪ್ಪ.—ಇದು eligibility list. ಇದರಲ್ಲಿ direct recruitment ಪ್ರಶ್ನೆಯೇ ಉದ್ಭವಿನುವುದಿಲ್ಲ.

ಶ್ರೀ ಜಿ. ಪುಟ್ಟನ್ವಾಮಿ.—ಈ ಲನ್ಟ್‌ನಲ್ಲಿ ಎಷ್ಟು ಜನರ ಹೆನರುಗಳನ್ನು ನೇರಿನಿದೆ ?

ಶ್ರೀ ಕಡಿದಾಳ್ ಮಂಜಪ್ಪ.—75 ಜನರ ಹೆನರುಗಳನ್ನು ನೇರಿನಿದೆ.

ಶ್ರೀ ಜಿ. ಪುಟ್ಟನ್ವಾಮಿ.—ಅದರಲ್ಲಿ ನಿಮ್ನ ವರ್ಗದವರ ಹೆನರುಗಳನ್ನು ಹೆಚ್ಚಾಗಿ ನೇರಿನಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಅದಕ್ಕೆ ಆಗಲೇ ಉತ್ತರ ಹೇಳಿದೆ.

ಶ್ರೀ ಜಿ. ಪುಟ್ಟನ್ವಾಮಿ.—ಒಟ್ಟು ಪ್ರಜಾ ನಂಖ್ಯೆಯ ಆಧಾರದಮೇಲೆ proportional ಆಗಿ ನೋಡಿದರೆ ಈ ನಂಖ್ಯೆ ಆ ಲನ್ಟ್‌ನಲ್ಲಿ ಬಹಳ ಕಡಮೆಯಾಗಿದೆ ಯೆಂಬುದು ನರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ನರ್ಕಾರದವರು ನಿಯಮಕ್ಕನುನಾರವಾಗಿ ನಡೆಯುತ್ತಾರೆಂದು ಆಗಲೇ ಹೇಳಿದ್ದೇನೆ.

ಶ್ರೀ ಜಿ. ಪುಟ್ಟನ್ವಾಮಿ.—ಈ ನಂಖ್ಯೆ ಕಡಮೆಯಾಗಿದ್ದು ಅನ್ಯಾಯವಾಗಿದೆಯೆಂದು ಹೇಳುತ್ತೇನೆ. ಇದಕ್ಕೆ ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—ಅನ್ಯಾಯವಾಗಿದೆಯೆಂದು ಒಪ್ಪಿಕೊಂಡಿಲ್ಲ.

ಶ್ರೀ ಆರ್. ಅನಂತರಾಮನ್.—ಅಮಲ್ದಾರಿ ಪಟ್ಟಿಯಲ್ಲಿ ಪಬ್ಲಿಕ್ ನರ್ವಿನ್ ಕಮಿಶನ್‌ನವರು ಹಿಂದುಳಿದ ವರ್ಗದವರಿಂದ ಒಂದು ಹೆನರನ್ನೂ ನೇರಿನಿಲ್ಲ ಅಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ತಮ್ಮ information ನರಿಯಲ್ಲ.

ಶ್ರೀ ಎಚ್. ಕೆ. ಶಿವರುದ್ರಪ್ಪ.—75 ಜನರಿರುವ ಈ ಲನ್ಟ್‌ನಿಂದ ಯಾರನ್ನಾದರೂ ತೆಗೆದುಹಾಕುವ ಅಧಿಕಾರ ನರ್ಕಾರಕ್ಕಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಇದೆ.

ಶ್ರೀ ಎಂ. ಮಾದಯ್ಯ.—ಈ ಪಟ್ಟಿಯನ್ನು ತಯಾರು ಮಾಡಿರುವುದರಲ್ಲಿ ಯಾವ ನೀತಿಯನ್ನು ಅನುನರಿನಿರುತ್ತೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಕಾನೂನು ಪ್ರಕಾರ ಯಾವ ನೀತಿಯನ್ನು ಅನುನರಿನಬೇಕೋ ಅದನ್ನು ಅನುನರಿನಿದೆ.

ಶ್ರೀ ಎಂ. ಮಾದಯ್ಯ.—ಅದೇನು ?

ಶ್ರೀ ಕಡಿದಾಳ್ ಮಂಜಪ್ಪ.—ಅರ್ಹತೆ, ನರ್ವಿನ್ ಮುಂತಾದುವನ್ನು ಗಣನೆಗೆ ತೆಗೆದುಕೊಂಡು ಮಾಡಿರುತ್ತಾರೆ.

ಶ್ರೀ ಎಂ. ಮಾದಯ್ಯ.—ಪಬ್ಲಿಕ್ ನರ್ವಿನ್ ಕಮಿಶನ್‌ನವರು 75 ಜನರ ಪಟ್ಟಿಯನ್ನು ಕಳುಹಿನಿರುವುದರಲ್ಲಿ ಅದನ್ನು order of merit ಪ್ರಕಾರ ಕಳುಹಿನಿರುತ್ತಾರೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನು ನಿರ್ದಿಷ್ಟವಾಗಿ ಹೇಳಲಾರೆ.

ಶ್ರೀ ಎಂ. ಮಾದಯ್ಯ.—4-5 ವರ್ಷದ ಹಿಂದೆ ನೇರಿನಲ್ಪಟ್ಟವರ ಹೆನರುಗಳು ನಹ ಈ ಲನ್ಟ್‌ನಲ್ಲಿದ್ದು ಅವರಿಗೆಲ್ಲ ಅವಕಾಶ ದೊರಕಬೇಕಾದರೆ ಇನ್ನೂ 4-5 ವರ್ಷಗಳಾಗುತ್ತದೆ ಅಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಈಗಲೇ ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಂ. ಮಾದಯ್ಯ.—ಈ ದೃಷ್ಟಿಯಿಂದ inadequate representation ಇರತಕ್ಕ community ಗೆ adequate representation ಕೊಡುವ ಬಗ್ಗೆ ಕಾರ್ಯಕ್ರಮ ಕೈಕೊಳ್ಳುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ತಮ್ಮದೊಂದು ನಿರ್ಣಯ ಈ ಬಗ್ಗೆ ಈ ಮಾನ್ಯ ನಭೆಯ ಒಪ್ಪಿಗೆ ಪಡೆದಿತ್ತು. ಅದರ ಪ್ರಕಾರ ಕಾರ್ಯಕ್ರಮವನ್ನು ಕೈಕೊಳ್ಳಲು ಪಬ್ಲಿಕ್ ನರ್ವಿನ್ ಕಮಿಶನ್‌ಗೆ ತಿಳಿನಿದೆ.

ಶ್ರೀ ಎಂ. ಮಾದಯ್ಯ.—ತಮ್ಮ ತಿಳಿವಳಿಕೆಯ ಪ್ರಕಾರ ಅವರು ಕಾರ್ಯಕ್ರಮ ಕೈಕೊಂಡಿದ್ದಾರೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ನೇಮಕಮಾಡುವಾಗ ನಾಮಾನ್ಯವಾಗಿ ಪ್ರಾತಿನಿಧ್ಯವಿಲ್ಲದೇ ಇರತಕ್ಕಂಥ communityಗೆ ಕೊಡಬೇಕೆಂದು ನಿಯಮವಿದೆ.

ಶ್ರೀ ಎ. ಭೀಮಪ್ಪನಾಯಕ್.—ಹಿಂದೆ ಇದಕ್ಕಾಗಿ ಒಂದು ನಮಿತಿಯನ್ನು ನೇಮಕಮಾಡಿ ಒಂದು ಲನ್ಟ್ ತಯಾರು ಮಾಡಿದಿರಿ, ಅಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು.

ಶ್ರೀ ಭೀಮಪ್ಪನಾಯಕ್.—ಹಿಂದಿನ ಲಸ್ಟ್‌ನಲ್ಲಿದ್ದವರ ಹೆಸರುಗಳನ್ನೆಲ್ಲಾ ಈಗ ಹೊಸದಾಗಿ ತಯಾರಿಸಿರುವ ಲಸ್ಟ್‌ನಲ್ಲಿ ಸೇರಿಸಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವರು ಈ ಲಸ್ಟ್‌ನಲ್ಲಿ ಬಂದಿಲ್ಲ.

ಶ್ರೀ ಎ. ಭೀಮಪ್ಪನಾಯಕ್.—ಏಕೆ ?

ಶ್ರೀ ಕಡಿದಾಳ್ ಮಂಜಪ್ಪ.—ಪಬ್ಲಿಕ್ ಸರ್ವಿಸ್ ಕಮಿಷನ್‌ನವರ ಅಭಿಪ್ರಾಯದಲ್ಲಿ ಅವರಿಗೆ ಸಾಕಾದಷ್ಟು ಅರ್ಹತೆ ಇಲ್ಲವೆಂದು ಕಂಡುಬಂದಿದೆ.

ಶ್ರೀ ಎ. ಭೀಮಪ್ಪನಾಯಕ್.—ಹಿಂದೆ ಇವ್ಹಹಾಗೆ ಪೋಲೀಸ್, ಎಕ್ಸೈಜ್, ರಿಜಿಸ್ಟ್ರೇಷನ್, ರೆವೆನ್ಯೂ ಮತ್ತು ಇತರ ಇಲಾಖೆಗಳಿಂದ ಆರಿಸಿ ಈ ಲಸ್ಟ್ ತಯಾರಿಸಲಾಗಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಇಂಥಿಂಥ ಇಲಾಖೆಗಳಿಂದ ಎಂಬುದನ್ನು ನಿರ್ದಿಷ್ಟವಾಗಿ ಹೇಳಲಾರೆ.

ಶ್ರೀ ಎ. ಭೀಮಪ್ಪನಾಯಕ್.—ಕೆಲವರನ್ನು ಪೋಲೀಸ್ ಡಿಪಾರ್ಟ್‌ಮೆಂಟಿನಿಂದ ತೆಗೆದುಕೊಂಡಿರುವುದು, ಇನ್ನು ಕೆಲವರನ್ನು ಶಿಫಾರಸಿನಮೇರೆ ತೆಗೆದುಕೊಂಡಿರುವುದು, ಇನ್ನು ಕೆಲವರ ವಿಚಾರದಲ್ಲಿ ಪಬ್ಲಿಕ್ ಸರ್ವಿಸ್ ಕಮಿಷನ್ನಿನವರ ಅವಗಾಹನೆಗೆ ಹೋದಮೇಲೆ ಬದಲಾವಣೆಯಾಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಮಾನ್ಯ ಸದಸ್ಯರು ಈ ವಿಚಾರವನ್ನು ಈಗ ನನ್ನ ಗಮನಕ್ಕೆ ತಂದಿರುತ್ತಾರೆ. ಅದನ್ನು ಪರಿಶೀಲಿಸುತ್ತೇನೆ.

ಶ್ರೀ ಎ. ಭೀಮಪ್ಪನಾಯಕ್.—ಹಿಂದಿನ ಲಸ್ಟ್‌ನಲ್ಲಿ ಅನೇಕರು ಅರ್ಹತೆ ಪಡೆದಿದ್ದರೂ ಅವರ ಹೆಸರನ್ನು ಸೇರಿಸದೇ ಇರುವ ಬಗ್ಗೆ ಸರ್ಕಾರಕ್ಕೆ representation ಬಂದಾಗ ಅವರ ಹೆಸರನ್ನು ಹೊಸ ಲಸ್ಟ್ ತಯಾರುಮಾಡುವಾಗ ಪರಿಶೀಲನೆಗೆ ತೆಗೆದುಕೊಳ್ಳುವುದಾಗಿ ಭರವಸೆ ಕೊಟ್ಟಿರಲಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ನೆನಪಿಲ್ಲ.

ಶ್ರೀ ಎ. ಭೀಮಪ್ಪನಾಯಕ್.—ಈಗ ಅವರ ವಿಚಾರದ ಬಗ್ಗೆ ಸರ್ಕಾರದವರೇನಾದರೂ ಕಾರ್ಯಕ್ರಮ ಕೈಕೊಳ್ಳುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಇಡೀ ಪ್ರಶ್ನೆ ಈಗ ಸರ್ಕಾರದ ಮುಂದೆ ಪರಿಶೀಲನೆಗೆ ಬಂದಿದೆ. ಅದನ್ನು ಪರಿಶೀಲಿಸಿ ತೀರ್ಮಾನ ಕೈಕೊಳ್ಳುತ್ತಾರೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕೆಲವು ಹೆಸರುಗಳನ್ನು ಬಿಟ್ಟಿರುವ ಬಗ್ಗೆ ಪಬ್ಲಿಕ್ ಸರ್ವಿಸ್ ಕಮಿಷನ್ ಅವರ ಅಭಿಪ್ರಾಯದಲ್ಲಿ ತಕ್ಕ ಅರ್ಹತೆ ಪಡೆದಿಲ್ಲವೆಂದು ತಿಳಿಸಿದಿರಿ. ಅಂದರೆ ಆ ಬಗ್ಗೆ ಅವರು ಸಾಕ್ಷಿ ಸಾಹಿತ್ಯಗಳನ್ನಿಟ್ಟುಕೊಂಡು ಹೇಳಿರುತ್ತಾರೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಹೇಳುವುದಕ್ಕಾಗುವುದಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ವಯಸ್ಸಿನ ಆಧಾರದಮೇಲೇನಾದರೂ ಅವರ ಅರ್ಹತೆ ಪಡೆದಿಲ್ಲವೆಂಬ ಅಭಿಪ್ರಾಯಕ್ಕೆ ಬಂದಿದ್ದಾರೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ.

12-30 P.M.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ 75 ಜನರದ್ದು ಇದೇ ಕಡೆಯ ಲಸ್ಟೋ ಅಥವಾ ಪುನಃ ಏಮರ್ಶೆ ಮಾಡಿ ಅರ್ಹತೆ ಇರತಕ್ಕವರನ್ನು ಕೈಬಿಟ್ಟಿದ್ದರೆ ಅಂತಹವರನ್ನು ಸ್ಥೀರಿಸುವುದಕ್ಕೆ ಪುನರಾಲೋಚನೆ ಮಾಡುತ್ತೀರೋ ?

ಶ್ರೀ ಕಡಿದಾಳ್ ಮಂಜಪ್ಪ.—ಆ ಇಡೀ ಪ್ರಶ್ನೆ ಸರ್ಕಾರದ ಮುಂದೆ ಇದೆ ಎಂದು ಆಗಲೇ ಅರಿಕೆ ಮಾಡಿಕೊಂಡೆ.

ಶ್ರೀ ಆರ್. ಮುನಿಸ್ವಾಮಯ್ಯ.—ಈ ಪಟ್ಟಿಯಲ್ಲಿ ವಿಶ್ವಕರ್ಮ ಮತ್ತು ವೈಶ್ಯ ಜನಾಂಗದವರಿಗೆ ಸಾಕಾದಷ್ಟು ಪ್ರಾತಿನಿಧ್ಯವಿಲ್ಲ ಎಂದು ಕೇಳುತ್ತೇನೆ ; ಅದು ನಿಜವೇ ?

ಶ್ರೀ ಕಡಿದಾಳ್ ಮಂಜಪ್ಪ.—ಆ ವಿಚಾರ ಹೊರಪಡಿಸುವುದಕ್ಕಾಗುವುದಿಲ್ಲ.

ಶ್ರೀ ಟಿ. ಹನುಮಯ್ಯ.—ಪ್ರಾತಿನಿಧ್ಯ ಇಲ್ಲದೇ ಇರತಕ್ಕಂತಹವರಿಗೆ ಹೆಚ್ಚು ಅವಕಾಶ ಕೊಡುತ್ತೀರಾ, ಸ್ವಾಮಿ ! ಪ್ರಾತಿನಿಧ್ಯ ಇಲ್ಲದೇ ಇರತಕ್ಕವರಿಗೆ ಹೆಚ್ಚಿನ ಪ್ರಾತಿನಿಧ್ಯ ಕೊಡುತ್ತೇವೆ ಎಂದು ಹಿಂದೆ ಅಪ್ಪಣೆ ಆಗಿತ್ತು.

ಉಪಾಧ್ಯಕ್ಷರು.—ಈಗಲೂ ಅಪ್ಪಣೆ ಕೊಟ್ಟಿರಲ್ಲ !

ಶ್ರೀ ಟಿ. ಹನುಮಯ್ಯ.—ಹೆಚ್ಚು ಪ್ರಾತಿನಿಧ್ಯ ಇರುವವರಿಗೆ ಅವಕಾಶ ಕೊಡುವುದನ್ನು ನಿಲ್ಲಿಸಿ ಕಡಮೆ ಬಿದ್ದವರು ಅವರ ಸಮಾನಕ್ಕೆ ಬರುವವರೆಗೂ ಹೆಚ್ಚು ಪ್ರಾತಿನಿಧ್ಯ ಕೊಡುವ ಏರ್ಪಾಡು ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಏನೇನು ನಿಯಮಗಳಿವೆಯೋ ಆ ನಿಯಮಾವಳಿಗಳ ಪ್ರಕಾರ ನಡೆದುಕೊಳ್ಳುತ್ತೇವೆ.

ಶ್ರೀ ಟಿ. ಹನುಮಯ್ಯ.—ಸಾಕಾದಷ್ಟು ಪ್ರಾತಿನಿಧ್ಯವಿಲ್ಲದೇ ಇರತಕ್ಕವರು ಇತರರಿಗೆ ಸರಿಸಮಾನರಾಗುವವರೆಗೂ ಜಾಸ್ತಿ ಪ್ರಾತಿನಿಧ್ಯ ಇರುವವರಿಗೆ ಅವಕಾಶ ಕೊಡುವುದನ್ನು ಸ್ವಲ್ಪಕಾಲದವರೆಗೂ ನಿಲ್ಲಿಸುತ್ತೀರಾ ಎಂದು ?

ಶ್ರೀ ಕಡಿದಾಳ್ ಮಂಜಪ್ಪ.—ಅದು ದೊಡ್ಡ ಪ್ರಶ್ನೆ. ಅದನ್ನು ಇನ್ನೊಂದು ಸಂದರ್ಭದಲ್ಲಿ ವಿಚಾರ ಮಾಡುತ್ತೇವೆ.

Probationary Assistant Engineers (Reservation for Scheduled Castes).

Q.—127. Sri B. RACHAIAH (Yelandur—Scheduled Castes) —

Will the Government be pleased to state :—

(*a*) whether it is not a fact that some four vacancies of Probationary Assistant Engineers were reserved last year for being filled up by candidates belonging to Scheduled Castes ;

(*b*) if so, whether the vacancies were advertised and applications called for and when ;

(*c*) when they are going to take further steps to make the appointments ?

A.—Sri Kadidal MANJAPPA (Minister for Revenue and Public Works).—

(*a*) Yes.

(*b*) Yes, on 2nd February 1954.